ಮೈಸೂರ ಗೆಜೆಟ್ಟು.

ನಂ. 24 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1885.

ಬೆಂಗಳೂರು, ಶನಿವಾರ, ಜೂನ್ ತಾ|| 13, ಸನ್ 1885.

ಸೂ:- ಈ ಭಾಗವನ್ನು ಪ್ರತ್ಯೇಕ ನೇಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ನಂಬ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವ್ಯಾರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜ್‌ರಯವರು, ಸರ್ವೆ ವ ಇನಾಂ ಸೂಪರ್ಡಿಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ ವರ್ಕಸ್ ಆಫೀಸರ್‌ಗಳು, ಮೈಸೂರು ಸ್ಟೇಪ್ಲೇಯಿಲೆವೆ, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಜೇ ಬಕ್‌ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಶನ್ಸ್ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೋಲೀಸ್‌ಸೂಪರ್ಡಿಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮತ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್‌ಮಾಡಲ್ಪಟ್ಟ ಅಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 21ನೇ ಮೇ 1885.

ನಂ. 51.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟನಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮೇತಾನಕ್ಕೊಸ್ಕರ ಕ್ರಮಪ್ರಕಾರ ಜಪ್ತ್ಮಾಡಲ್ಪಟ್ಟರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು, ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ, ಉಳಿಕೆ ಯಾವದೂ ಇಲ್ಲದೆ ಗ್ರಾಮವು ಪೂರ್ತಿ ದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟು ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು, ತಮ್ಮ ಯಖ್ತ್ಯಾರೀ ವೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೀಕಡಾ 25ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋಪರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ ಬಡ್ಡೀ ವ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುವುಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ಮಾಡತಕ್ಕದ್ದು.

7. ಹರಾಜ್ ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯವಾದ್ದಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮವ ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಬಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬಿಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟಿರುತ್ತೆ.

ಡಿಸ್ಟ್ರಿಕ್ಟ್ ತಾಲ್ಲೂಕು. ಹೋಬ್ಳಿ.	ಗ್ರಾಮಗಳು.	ಹರಾಜ್‌ದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವ ಯಾ ಬೆಳೆಯು.	ಸಾಲೀಯಾನಾ ಸರಕಾರದ ಕಂದಾಯ ಕೊಡಬೇಕಾದ	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೊ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
ಹಾಸನ ಹಾಸನ. ಸಕಲೇಷ	ಪೂಮಗಾ ಮೆ.	ರಾಮಚಂದ್ರ ದೀಕ್ಷಿತ, ಇತರ 44 ಮಂದಿ.	ಖಂ. ಕೂ. ಪ. 15 12 1¼	ರೂ. ಆ. ಪೈ. 198 6 5	ರೂ. ಆ. ಪೈ. 195 6 5	ರೂ. ಆ. ಪೈ. 407 0 9	ಸನ 1885ನೇ ಇಸವಿ ಜುಲೈ ಗುರ್ತೇ ತಾರೀಖಿನಲ್ಲಿ ಹಾಸನ ತಾಲ್ಲೂಕು ಕಚ್ಚೇರಿಯಲ್ಲಿ ಅಮಲ್‌ದಾರ್ ರೂಬರೂ.

ತಾರೀಖು 27ನೇ ಮೇ 1885.

ಕ್ಯಾಂಪ್ ನಂ. 274.—ಸನ 1884ನೇ ಇಸವಿ ಡಿಸಂಬರ್ 12ನೇ ಮತ್ತು ಂ 187ನೇ ನಂಬರ್ ಇಸ್ತಿಹಾರ್‌ನಾಮೆಯೊಜನೆ ಫಾಯಿಷಾದ ರೂಲ್ಸ್ ಪೈಕೀ Vನೇ ರೂಲಿಗೆ ಇದರಡಿ ಕಂಡ ಅಧಿಕಾರಂಕಗಳು ಶ್ರೀಮನ್ ಮಹಾರಾಜ ರಾಜಾಸಾಹೇಬರವರ ಸರಕಾರದಿಂದ ಮಂಜೂರ್ಮಾಡಲ್ಪಟ್ಟು ಸಮಸ್ತ ಜನಗಳ ತಿಳಿವಳಿಕೆ ಬಗ್ಗೆ ಫಾಯಿಷ್ ಮಾಡಲ್ಪಟ್ಟಿರುತ್ತೆ:—

V (c) ಸೆಕೆಂಡ ಗ್ರೇಡ ಪ್ಲೀಡರ ಪರೀಕ್ಷೆಗೆ ಹಾಜರಾಗಿ ಫಸ್ಟ್ ಗ್ರೇಡ ಪ್ಲೀಡರಾಗುವದಕ್ಕೆ ಅವಶ್ಯಕವಾದ ಸಂಖೆಯ ಮಾರ್ಕು ಗಳನ್ನು ಪಡೆಯುವ ಯಾವ ವ್ಯಮೇದವಾರನಿಗಾಗಲಿ, ಅವನು ಅನ್ಯಥಾ ಅರ್ಹನಾಗಿದ್ದು ಮತ್ತು XIನೇ ರೂಲಿನಲ್ಲಿ ವಿಧಿಸಲ್ಪಟ್ಟಂತೆ ಜಾಸ್ತಿ ಫೀ ಯನ್ನು ಪಾವತೀ ಮಾಡಿದ ತರುವಾಯ, ಫಸ್ಟ್ ಗ್ರೇಡಿನ ಸರಟಿಫಿಕೇಟ್ ಕೊಡಲ್ಪಡುವದು.

(d) ಫಸ್ಟ್ ಗ್ರೇಡ ಪ್ಲೀಡರ ಪರೀಕ್ಷೆಗೆ ಹಾಜರಾಗಿ 2ನೇ ಗ್ರೇಡಿಗೆ ಮಾತ್ರವೇ ಅರ್ಹನಾಗುವ ಯಾವ ವ್ಯಮೇದವಾರನಿಗಾಗಲಿ ಸೆಕೆಂಡ ಗ್ರೇಡಿನ ಸರಟಿಫಿಕೇಟ್ ಕೊಡಲ್ಪಡುವದು.

ತಾರೀಖು 2ನೇ ಜೂ॥ 1885.

ನಂ. 54.—ತುಮಕೂರು ಡಿಸ್ಟ್ರಿಕ್ಟ್ಟು ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರ ಡೆಪ್ಯುಟಿ ಅಮಲ್ದಾರ ಎಸ್. ಕೃಷ್ಣರಾವ ಬಿ. ಎ. ಯವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು, ವಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 3ನೇ ಜೂ॥ 1885.

ನಂ. 55.—ಹಾಸನ ಮುನಸೀಫ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟ್ ಬುರ್ಜಪರೀಕ್ಷರು, ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 335ನೇ ಸೆಕ್ಷನ್ ನಿಯಮವನುಸರಿಸಿ ಫಿರ್ಯಾದೀಗಳ ಮತ್ತು ಸಾಕ್ಷಿಗಳ ಸಾಕ್ಷ್ಯವನ್ನು ಇಂಗ್ಲಿಷ್ ಭಾಷೆಯೊಳಗೆ ಸ್ವದಸ್ತೂರ್ ತೆಗದುಕೊಳ್ಳುವಂತೆ ನಿಯಮಿಸಲ್ಪಟ್ಟಿರುತ್ತಾರೆ.

ತಾರೀಖು 4ನೇ ಜೂ॥ 1885.

ನಂ. 56.—ಚಾಮರಾಜನಗರ ತಾಲ್ಲೂಕು ಅಮಲ್ದಾರ ಮಹಾಬಲರಾಯರಿಗೆ, 1885ನೇ ಇಸವಿ ಮಾರ್ಚೀ 3ನೇ ವರ್ತಮಾನ್ಯಾವ ಕ್ಯಾಂಪ್ 246ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಒಂದು ತಿಂಗಳ ಪ್ರಿವಿಲೀಜ್ ರಜಾಕ್ಕಿಂತ ಜಾಸ್ತೀಯಾಗಿ 2 ದಿವಸಗಳು ಕೊಡಲ್ಪಟ್ಟಿರುತ್ತೆ.

ತಾರೀಖು 4ನೇ ಜೂ॥ 1885.

ನಂ. 57.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಪ್ಪೀಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ನವಷಹಾನಕ್ಕೊಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮಗಳು ಇದರಡೀಕಂಡ ತಪ್ಪೀಯಲ್ಲಿ ನಮೂದಿಸುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವವು; ಮತ್ತು ಸದರೀ ತಾರೀಖುಗಳಲ್ಲಿ ಬೆಳ್ಗೆ 11 ಘಂಟೆಗೆ ಹರಾಜು ಷರುವಾಗಿ, ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಚಡ ದರಖಾಸ್ತುದಾರರಿಗೆ ಹರಾಜ್ ನಿಲ್ಲುವವು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮುಂಜಾಡ್ಮಾಡಲ್ಪಟ್ಟ ವೃತ್ತೀಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು, ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಜೇಕಾಗಿರುತ್ತೆ. ಕ್ರಯದ ಮೊಬಲಗ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುಪ್ತುಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮ್ಮಾಗಿರುವಲ್ಲಿ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮಗಳು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಬಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಹೇಲ್ನಲ್ಲಾಗಲಿ ಅಂದಾಜು ಬೀಜವರೀ ವಿಷಯವ ಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ತಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆರ್ಡೆರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು. ತಾಲ್ಲೂಕು. ಹೋಬ್ಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜು ಹುಟ್ಟುವಳೀ ದುಡ್ಡೇ ದೇರೀಜು.	ಸುಲಿಯಾನಾ ಸರಕಾರಕ್ಕೆ ಕೊಡೇಕಾದ ಕ್ವಿಟೆರಂಟ್.	ಯಾವಜ್ಜೀಕೀಗೋ ಸ್ಥರ ಗ್ರಾಮಗಳು ಹರಾಜ್ ಮಾಜಲ್ಪಡುತ್ತೊ ಆಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
			ಎ. ಗುಂ. ಗ.	ರೂ. ಆ. ಪೈ.	ರೂ. ಆ. ಪೈ.	ರೂ ಅ. ಪೈ.	
ಮೈಸೂರು. ಟೇಲೂರು. ಅಳ್ಳಾಪ್ಪೆ.	ಕಂದಮರ	ಕೊಂಡಿನಾರಣಾಚಾರ್, ಇತರ 19 ಮಂದಿ	404 4 0	702 4 0	240 0 0	826 13 7	1885ನೇ ಇಸವಿ ಜುಲೈ 8ನೇ ಮಂಗಳವಾರ ಬೇಲೂರು ತಾಲ್ಲೂಕು ಕಛೇರಿಯೊಳಗೆ ಅಮಲ್ದಾರ್ರು ರೂಬರು.
	ಹರಳಕಟ್ಟೆ	ದಾಸಯ್ಯಂಗಾರ್, ಇತರ 4 ಮಂದಿ	50 17 0	102 0 7	35 0 0	25 15 9	
ಟೇಲೂರು	ಮಾಕನಹಳ್ಳಿ	ಸುಬ್ಬಾಭಟ್ಟು ಬಿ. ಕೇಶವಭಟ್ಟು ಮತ್ತು ರಾಮಭಟ್ಟ	734 34 0	475 14 5	478 0 0	66 14 3	ಡಿಟೋ 9ನೇ ಮಂಗಳವಾರ.

ತಾರೀಖು 5ನೇ ಜೂ೯ 1885.

ನಂ. 58.—ಖಾ॥ ಖಹದೂರ್ ಅಬ್ದುಲ್‌ಖಾದರ್ ಯವರು, ಸ೯ 1885ನೇ ಇಸವಿ ಜೂ೯ 1ನೇ ಮಂಗಳವಾರ ಮಧ್ಯಾನ್ಹಾತ್ಪರ ಮೈಸೂರು ಡಿಸ್ಟ್ರಿಕ್ಟು ವ ಖಜಾನೆ ಚಾರ್ಜನ್ನು ಮೆ॥ ವಿ. ಪಿ. ಮಾಧವರಾಯರಿಗೆ ವಪ್ಪಿಸಿರುತ್ತಾರೆ.

ತಾರೀಖು 29ನೇ ಮೇ 1885.

ಕ್ಯಾಂಪ್ ನಂ. 303.—ಬೇಲೂರು ತಾಲ್ಲೂಕು ಅಮಲ್ದಾರ್ ಬಿ. ಕೇಶವಯ್ಯಂಗಾರ್ರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 12 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 1ನೇ ಜೂ೯ 1885.

ಕ್ಯಾಂಪ್ ನಂ. 308.—ಮೈಸೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಮೆ॥ ಅಬ್ದುಲ್‌ಖಾದರ್ ಖಾ॥ಖಹದೂರವರಿಗೆ ಮಾಜೆ ಮೆಜಸ್ಟೂರ್ 1ನೇ ಮಂಗಳವಾರ ಲಾಗಾಯತು 10 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೆ॥ ಅಬ್ದುಲ್‌ಖಾದರ್ ಯವರು ರಜಾವ ಮೇಲೆ ಇರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿಗೆ, ಫೈರ್‌ಟ್ರಾಕ್ಸ್ ಸಬ್ ಡಿವೀರ್ಜ್ ಜಾರ್ಜಿನಲ್ಲಿ ಇರುವ ಅ॥ ಕಮ್ಮಿಷನರ್ ಮೆ॥ ವಿ. ಪಿ. ಮಾಧವರಾವ್ ಬಿ. ಎ. ಯವರು, ತಮ್ಮ ಸ್ವಂತ ಕೆಲಸಗಳಲ್ಲದೆ ಮೈಸೂರು ಡಿಸ್ಟ್ರಿಕ್ಟ್ ಜೆ॥ ಕಮ್ಮಿಷನರ್ ವ ಡಿಸ್ಟ್ರಿಕ್ಟ್ ಮೂಜಿಸ್ಟ್ರೇಟರಾಗಿ ಸಹ ಕೆಲಸನೋಡುವಂತೆ ವೊಕರರ್ ಮಾಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 313.—ಅರಕಲ್‌ಗೂಡು ಡೆಪ್ಯೂಟಿ ಅಮಲ್‌ದಾರ್ ತಿರುವೆಂಗಡಸಾಮಿ ಪೊವಲಿದಾರ್‌ಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 2 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಿರುವೆಂಗಡಸಾಮಿ ಪೊವಲಿಯೂರು ರಜಾದ ಮೇಲೆ ಇರುವಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿಗೆ, ಹೊಳೆನರಸಿಪುರ ತಾಲ್ಲೂಕು ಅಮಲ್‌ದಾರ್ರು ಅರಕಲ್‌ಗೂಡ್ ರೆಂಜಿನ ಚಾರ್ಜನ್ನು ವಹಿಸತಕ್ಕದ್ದು.

ತಾರೀಖು 3ನೇ ಜೂನ್ 1885.

ಕ್ಯಾಂಪ್ ನಂ. 343.—ತೀರ್ಥಹಳ್ಳಿ ತಾಲ್ಲೂಕು ಅಮಲ್‌ದಾರ್ ತಿರುಮಲಾಚಾರ್ಯಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 15 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 345.—ಗುಡಿಬಂಡೆ ಡೆಪ್ಯೂಟಿ ಅಮಲ್‌ದಾರ್ ಸೀತಾರಾಮಯ್ಯನವರಿಗೆ, ಬರುವ ತಿಂಗಳು 16ನೇ ತಾರೀಖು ಲಾಗಾಯತು ವಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಸೀತಾರಾಮಯ್ಯನವರ ಗೈರ್‌ಹಾಜರೀಯಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿಗೆ, ಗೋರೀಬಿದನೂರು ತಾಲ್ಲೂಕು ಪೊಲೀಸ್ ಇನ್‌ಸ್ಪೆಕ್ಟರ್ ಗುಲಾಂ ಮೊಹಮೆದ್‌ಖಾಯವರು ಗುಡಿಬಂಡೆ 2ನೇ ಕ್ಲಾಸ್ ಡೆಪ್ಯೂಟಿ ಅಮಲ್‌ದಾರ್ ವ 3ನೇ ಕ್ಲಾಸ್ ಮೂಜಿಸ್ಟ್ರೇಟರಾಗಿ ಆ ಕ್ಟ್ ಮಾಡುವಂತೆ ವೊಕರರ್ ಮಾಡಲ್ಪಟ್ಟಿರುತ್ತಾರೆ.

ಹುಕ್ಕುಂ ಬವೋಜೀಬ್,
ಆರ್. ವಿಜಯಿಂದ್ರರಾವ್,
ಸೆಕ್ರಟೇರಿ.

ಮಿಲಿಟೆರಿ ಇಲಾಖೆ.

ತಾರೀಖು 2ನೇ ಜೂನ್ 1885.

ಸ್ ೧೮೮೪ನೇ ಇಸವಿ ಅಕ್ಟೋಬರ್ ತಾರೀಖು 1ರಲ್ಲು 1ನೇ ಪಟಾಲಂ 2ನೇ ಕ್ಲಾಸ್ ಸುಬೇದಾರ್ ದರ್ಜೆಗೆ ಹಂಗಾಮಿ ತರೀಕ್ ಬಡ್ತಿಮಾಡಲ್ಪಟ್ಟಿದ್ದ ಅದೇ ಪಟಾಲಮಿನ ಜಮಾದಾರ್ ಮುಜಾಜಿ ಯಂಬವರು, ಲೋಕಲ್ ಗವರ್ಣಮೆಂಟಿನ ಮಂಜೂರಾತಿನಿಸಿ, ಸದರೀ ದರ್ಜೆಯಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ಎ. ಸಿ. ಹೆ, ಕರ್ನಲ್,
ಮಿಲಿಟೇರಿ ಸೆಕ್ರಟೇರಿ.

ಪೊಲೀಸ್ ಇಲಾಖೆ.

ಇನ್ಸ್ಟಿಹಾರ್‌ನಾಮೆಗಳು.

ನಂ. 185—23. ತಾರೀಖು 1ನೇ ಜೂನ್ 1885.

ಹೆಗ್ಗಡ ದೇವನಕೋಟೆ ತಾಲ್ಲೂಕು ಹೊಸಹಳ್ಳಿ ವಾಸಸ್ಥನಾದ ಕೆಂಪಯ್ಯನೆಂಬುವನು ಅದೇ ತಾಲ್ಲೂಕು ಕೊಳಗಳ ಗ್ರಾಮದ ಶಾನುಭೋಗ ಕೇಷಯ್ಯ ಯಂಬವನನ್ನು ಖೂಮಾಡಿ ಫರಾರಿಯಾಗಿರುವದರಿಂದ ಸದರೀ ಕೆಂಪಯ್ಯನ ದಸ್ತಗಿರೀ ಬಗ್ಯೆ ಅಥವಾ ದಸ್ತಗಿರೀಗೆ ಸಾಧಕವಾದ ಖಾತಮಿಯನ್ನು ಕೊಡುವ ಬಗ್ಯೆ 50 ರೂಪಾಯಿಗಳ ಇನಾಮು ಕೊಡಲ್ಪಡುವದು.

ಸದರೀಯವನ ಚಹರೆಪಟ್ಟಿಯು ಇದರಡಿ ಕಂಡಂತೆ ಇರುತ್ತೆ:—

ಜೆಸರು—ಕೆಂಪಯ್ಯ, ತಂದೆಹೆಸರು—ಲಿಂಗೇಗೌಡ, ಜಾತಿ—ಶಿವಾಚಾರ ವಕ್ಕಲಿಗ, ವಯಸ್ಸು—ಸುಮಾರು 25 ವರುಷ, ವಾಸಸ್ಥಳ—ಹೆಗ್ಗಡದೇವನಕೋಟೆ ತಾಲ್ಲೂಕು ಹೊಸಹಳ್ಳಿಯಲ್ಲಿ ಅಳಿಯರಿಗೆ ವಾಸವಾಗಿದ್ದದ್ದು.

ಹೆಗ್ಗುರ್ತುಗಳು—ಳಳು ಉದ್ದನಾಗಿಧಾನೆ; ಕಪ್ಪುವರ್ಣ, ಸಣಿ ಮೀಸೆ; ದಾರದಲ್ಲಿ ಪೋಣಿಸಿದ ಒಂದು ಬೆಳ್ಳಿ ಕರಡಿಗೆ ಹಾಕಿಕೊಂಡಿಧಾನೆ. ತರಫಿನ ಯರಡು ಖಿಡಕುಗಳು, ಯಡಕಿವಿಯಲ್ಲಿ ಒಂದು ತಟ್ಟುಮುರು ಈ ಆಭರಣಂಗಳು ಮೈ ಮೇಲೆ ಇರುತ್ತೆ.

ಯಸ್. ವೆಂಕಟವರದಯ್ಯಂಗಾರ್,
ಅ॥ ಸೆಕ್ರಟೇರಿ.